ಶ್ರೀ ಎಂ ಎಸ್. ಕೃಷ್ಣನ್.—ನ್ಯಾಶನರ್ ಟೆಕ್ಸ್‌ಟೈಲ್ ಕಾರ್ಪೊರೇಷನ್ನಿನವರು ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ ಹೇಗೆ ಎಂಟು ನೂರು ಕುಟುಂಬಗಳವರ ಗತಿ ಏನಾಗ ಬೇಕು, ನ್ಯಾಶನರ್ ಟೆಕ್ಸ್‌ಟೈಲ್ ಕಾರ್ಪೊರೇಷನ್ ಇರುವದೇ ಸಿಕ್ ಮಿಲ್‌ಗಳನ್ನು ತೆಗೆದು ಕೊಳ್ಳುವ ಸಲುವಾಗಿ ಅವರೇ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರೆ ಹೇಗೆ? ಅವರು ತೆಗೆದುಕೊಂಡು ನಡೆಸುವುದಕ್ಕೆ ಆಗದಿದ್ದರೆ ಮಹಾರಾಷ್ಟ್ರದಲ್ಲಿ ಮತ್ತು ತಮಿಳುನಾಡು ಸರ್ಕಾರದವರು ತಾವೇ ಇಂಥ ಸಿಕ್ ಮಿಲ್‌ಗಳನ್ನು ತೆಗೆದುಕೊಂಡು ನಡೆಸುತ್ತಿರುವ ಹಾಗೆ ನಮ್ಮ ಕರ್ನಾಟಕ ರಾಜ್ಯ ಸರ್ಕಾರದವರು ಒಂದು ಟೆಕ್ಸ್‌ಟೈಲ್ ಕಾರ್ಪೊರೇಷನ್ ಮಾಡಿ ಈ ರೀತಿಯ ಸಿಕ್ ಮಿಲ್‌ಗಳನ್ನು ಏಕೆ ತೆಗೆದುಕೊಳ್ಳಬಾರದು?

ಅಧ್ಯಕ್ಷರು —ಈ ರೀತಿ ಥಟ್ಟನೆ ಪ್ರಶ್ನೆಗಳನ್ನು ಕೇಳುತ್ತಾ ನಿಂತು ಕೊಂಡರೆ ಅವರು ಹೇಗೆ ಉತ್ತರ ಕೊಡುವುದಕ್ಕೆ ಆಗುತ್ತದೆ ? ಇದಕ್ಕೆ ಅವರು ಏನಾದರೂ ಉತ್ತರ ಕೊಡುವ ಹಾಗಿದ್ದರೆ ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಸಿ ಎನ್ ಪಾಟೀಲ್.—ಇದರ ಬಗ್ಗೆ ಪುನಃ ಉತ್ತರವನ್ನು ಕೊಡುವ ಅವಶ್ಯಕತೆ ಇಲ್ಲ ವೆಂದು ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷಣಿಯರೇ ಇನ್ನೊಂದು ಮುಖ್ಯವಾದ ವಿಷಯವನ್ನು ತಮ್ಮ ಅವಗಾಹನೆಗೆ ತರುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ನಾನು ಮೊದಲೇ ತಮ್ಮ ಗಮನಕ್ಕೆ ತರಬೇಕಾಗಿತ್ತು, ಅದಕ್ಕಾಗಿ ತಮ್ಮ ಅನುಮತಿ ತೆಗೆದುಕೊಂಡು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ರಾತ್ರಿ ಹಳೆ ಮದ್ರಾಸ್‌ರಸ್ತೆಯಲ್ಲಿರುವ ವಿಗ್ರೊ ಮಾರ್ಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಯೂನಿಯನ್ ಮಾಡಿಕೊಂಡಿದ್ದಾರೆ ಎಂದು ಅಲ್ಲಿಯ ಕಾರ್ಮಿಕರನ್ನು ಹೊಲೀಸಿನವರು ಸಿಕ್ಕಾಪಟ್ಟೆ ಹೊಡೆದಿದ್ದಾರೆ ತಾರ್ತಾಪರಿಸ್ಥಿತಿ ತೆಗೆದಮೇಲೆ ಈರೀತಿ ಹೊಡೆಯುವುದಕ್ಕೆ ಶುರು ಮಾಡಿದ್ದಾರಲ್ಲಾ ಎಂದು ನಮಗೆ ದುಃಖವಾಗುತ್ತಿದೆ. ಆದುದರಿಂದ ಈ ವಿಷಯದ ಬಗ್ಗೆ ತಮ್ಮ ಅನುಮತಿ ತೆಗೆದುಕೊಳ್ಳದೇ ಮಾತನಾಡಲು ನನಗೆ ಇಷ್ಟವಿಲ್ಲ. ಆದುದರಿಂದ ಈ ವಿಷಯ ವನ್ನು ತಮ್ಮ ಅನುಮತಿ ಮೇರೆ ಮಾನ್ಯ ಮಂತ್ರಿಗಳವರ ಗಮನಕ್ಕೆ ತರುತ್ತಿದ್ದೇನೆ.

Tenth Report of the Committee on Estimates-presentation.

SMT. SUMATI B. MADIMAN (Dharwar-Rural).—Madam Speaker, I present the Tenth Report of the Committee on Estimates on 'Forest.'

MADAM SPEAKER —Report presented.

Petitions from Kapoli Group Gram Panchayat Committee and MNS Sangha Khanapur—Presentation

SRI N. B. SIRDESAI (Khanapur).—Madam Speaker, I present the following petitions.

(i) Petition signed by the Chairman, Kapoli Group Gram Panchayati Committee, Kapoli, and others regarding construction of Roads in the villages of Khanapur Taluk.

(ii) Petition signed by the Chairman, Sri Malaprabha Niravari Sahakari Sangh and others regarding Electrification of the villages of Khanapur Taluk.

MADAM SPEAKER.—The Petitions are presented.